# ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ
## ಡೇ ಎನ್.ಆರ್.ಎಲ್.ಎಂ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳ ನೇಮಕಾತಿ ಪ್ರಕ್ರಿಯೆ.

ಪ್ರಕಟಣೆ ಸಂಖ್ಯೆ: ಜಿಪಂಚಿ/ಡಿಆರ್‌ಡಿಎ/ವಿವ/2017-18 ದಿನಾಂಕ:12.02.2018

ಉಲ್ಲೇಖ: 1. ಕರಾಗ್ರಾಜೀಸಂಸಂ:ಆಡಳಿತ:03:04:2017-18 ದಿನಾಂಕ:06.02.2018 ಮತ್ತು 08.02.2018.

******

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯಿಂದ ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ಮುಖಾಂತರ ತಾಲ್ಲೂಕು ಅಭಿಯಾನ ನಿರ್ವಹಣೆ ಘಟಕದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಹೊರಸಂಪನ್ಮೂಲ(ಹೊರಗುತ್ತಿಗೆ) ಆಧಾರದಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವಿರ, ವಯೋಮಿತಿ, ವಿದ್ಯಾರ್ಹತೆ ಇತ್ಯಾದಿ ವಿವರಗಳನ್ನು ಮುಂದೆ ನೀಡಲಾಗಿದೆ. ತಮ್ಮ ಬಯೋಡೇಟಾವನ್ನು ದಿನಾಂಕ:20.02.2018 ರ ಸಂಜೆ 5.00 ಘಂಟೆಯೊಳಗಾಗಿ ಜಿಲ್ಲಾ ಪಂಚಾಯತ್‌ನ ಈ ಮೇಲ್ ವಿಳಾಸ pddrdackm@gmail.com ಕ್ಕೆ ಸಲ್ಲಿಸುವುದು. ಅರ್ಜಿಯ ಆಹ್ವಾನ ಜಿಲ್ಲಾ ಪಂಚಾಯತ್‌ನಿಂದ ಮಾಡಲಾಗಿದ್ದು, ಮುಂದಿನ ಎಲ್ಲಾ ಪ್ರಕ್ರಿಯೆ ಮತ್ತು ನೇಮಕಾತಿಗಳು ಜಿಲ್ಲಾ ಪಂಚಾಯತ್ ಮತ್ತು ಸರ್ಕಾರದ ಅಗತ್ಯ ಆಧರಿಸಿ ಹೊರ ಸಂಪನ್ಮೂಲ ಸಂಸ್ಥೆಯಿಂದ ಅಥವಾ ಗುತ್ತಿಗೆ ಆಧಾರದ ಮೇಲೆ ನಡೆಯುತ್ತದೆ ಮತ್ತು ಸದರಿ ನೇಮಕಾತಿಗಳು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು ಯಾವುದೇ ಕಾರಣಕ್ಕೆ ಯಾವುದೇ ಸಂದರ್ಭದಲ್ಲಿ ಖಾಯಂಗೊಳ್ಳುವುದಿಲ್ಲ ಮತ್ತು ಸರ್ಕಾರದ ಸೇವೆಯಲ್ಲಿ ವಿಲೀನವಾಗುವುದಿಲ್ಲ.

ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು(Taluk Programe manager-TPM) ಹಾಗೂ ವಲಯ ಮೇಲ್ವಿಚಾರಕರು(Clustor Suporvisor) ನಿರ್ವಹಿಸಬೇಕಾದ ಕರ್ತವ್ಯಗಳ ವಿವರ ಮತ್ತು ನೇಮಕಾತಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳು ಜಿಲ್ಲಾ ಪಂಚಾಯತ್‌ನ www.chikkamagaluru.nic.in ರಲ್ಲಿ ಲಭ್ಯವಿರುತ್ತದೆ ಹಾಗೂ ಅಗತ್ಯವಾದಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇಲ್ಲಿಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಅಭ್ಯರ್ಥಿಗಳು ಅರ್ಜಿಯಲ್ಲಿ ತಮ್ಮ ಮೊಬೈಲ್ ದೂರವಾಣಿ ಸಂಖ್ಯೆ, ಈ-ಮೇಲ್ ವಿಳಾಸ ಮತ್ತು ಆಧಾರ್ ವಿವರಗಳ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.

ಅ)

| | |
|---|---|
| 1. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: | 20.02.2018 ಸಂಜೆ 5.00 ಘಂಟೆ |
| 2.ಲಿಖಿತ ಪರೀಕ್ಷೆ | 04.03.2018 ರ ಭಾನುವಾರ(ಪರೀಕ್ಷೆ ಸ್ಥಳ ಮತ್ತು ವೇಳೆಯನ್ನು ಮುಂದೆ ತಿಳಿಸಲಾಗುವುದು). |
| 3.ಲಿಖಿತ ಪರೀಕ್ಷೆಯ ರ್ಯಾಂಕಿಂಗ್ ಪಟ್ಟಿ ಸಲ್ಲಿಸುವಿಕೆ | 10.03.2018 ರ ಶನಿವಾರ ಪ್ರಕಟಣೆ |
| 4. ನೇಮಕಾತಿ ಪತ್ರ ವಿತರಣೆ | 12.03.2018 ರ ಸೋಮವಾರ |

ಆ)

| ಕ್ರಸಂ | ಹುದ್ದೆಯ ವಿವರ | ವೇತನ | ಖಾಲಿ ಹುದ್ದೆಗಳ ಸಂಖ್ಯೆ | ನಿಗದಿಪಡಿಸಲಾದ ವಿದ್ಯಾರ್ಹತೆ | ವಯೋಮಿತಿ | ಖಾಲಿ ಹುದ್ದೆಗಳಿರುವ ತಾಲ್ಲೂಕು ಕೇಂದ್ರಗಳ ಹೆಸರು & ಸಂಖ್ಯೆ | ನೇಮಕಾತಿ ವಿಧಾನ |
|---|---|---|---|---|---|---|---|
| 1 | ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು (TPM) | ರೂ25000/- | 07 | ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೋಮದೊಂದಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ 5 ವರ್ಷಗಳ ಅನುಭವ | ಗರಿಷ್ಟ 45 ವರ್ಷ | ಚಿಕ್ಕಮಗಳೂರು, ಕಡೂರು, ತರೀಕೆರೆ, ಮೂಡಿಗೆರೆ, ಕೊಪ್ಪ, ಶೃಂಗೇರಿ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ತಲಾ ಒಂದು ಹುದ್ದೆ | i)ಲಿಖಿತ ಪರೀಕ್ಷೆ ಶೇ70 . ii)ಮೌಖಿಕ ಸಂದರ್ಶನ ಶೇ30. iii)ಪ್ರಶ್ನೆ ಪತ್ರಿಕೆಗಳು ರಾಜ್ಯ ಮಟ್ಟದಿಂದ ತಯಾರಾಗುವುವು iv)ಸಂದರ್ಶವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು v) ಒಂದು ಹುದ್ದೆಗೆ 3 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು |
| 2 | ವಲಯ ಮೇಲ್ವಿಚಾರಕರು (Clustor Suporvisor) | ರೂ 15000/- | 17 | ಪದವಿಯೊಂದಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಎರಡು ವರ್ಷದ ಅನುಭವ | ಗರಿಷ್ಟ 35 ವರ್ಷ | ಚಿಕ್ಕಮಗಳೂರು-03 ಕಡೂರು-02 ಕೊಪ್ಪ-02 ಮೂಡಿಗೆರೆ-03 ನ.ರಾ.ಪುರ-02 ಶೃಂಗೇರಿ-03 ತರೀಕೆರೆ-02 ಹುದ್ದೆಗಳು | i)ಲಿಖಿತ ಪರೀಕ್ಷೆ ಶೇ70 . ii)ಮೌಖಿಕ ಸಂದರ್ಶನ ಶೇ30. iii)ಪ್ರಶ್ನೆ ಪತ್ರಿಕೆಗಳು ರಾಜ್ಯ ಮಟ್ಟದಿಂದ ತಯಾರಾಗುವುವು |

| | | | | | | | |
|---|---|---|---|---|---|---|---|
| | | | | | | | iv)ಸಂದರ್ಶವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು v) ಒಂದು ಹುದ್ದೆಗೆ 3 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು |
| 3 | ಎಂಐಎಸ್/ ಡೇಟಾ ಎಂಟ್ರಿ ಆಪರೇಟರ್ | ರೂ 13000/- | 07 | ಯಾವುದೇ ಪದವಿಯೊಂದಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ 1 ವರ್ಷದ ಕಾರ್ಯನಿರ್ವಹಣೆ ಅನುಭವ ಹಾಗೂ ಕಂಪ್ಯೂಟರ್ ಜ್ಞಾನ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ 30 WPM ಟೈಪಿಂಗ್ ಸ್ಪೀಡ್ | ಗರಿಷ್ಠ 35 ವರ್ಷ | ಚಿಕ್ಕಮಗಳೂರು, ಕಡೂರು, ತರೀಕೆರೆ, ಮೂಡಿಗೆರೆ, ಕೊಪ್ಪ, ಶೃಂಗೇರಿ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ತಲಾ ಒಂದು ಹುದ್ದೆ | i) ಅಭ್ಯರ್ಥಿಗಳ ಆಯ್ಕೆಯನ್ನು ಕಂಪ್ಯೂಟರ್ ಜ್ಞಾನ ಸಾಮಾನ್ಯ ಗಣಿತ ಇವುಗಳಲ್ಲಿ ಪರೀಕ್ಷೆ ಮಾಡಿ ಆಯ್ಕೆ ಮಾಡಲಾಗುವುದು. ii) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ವಿಷಯಗಳ ಪರಿಶೀಲನೆಗಾಗಿ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಲಾಗುವುದು. |

ಈ ಎಲ್ಲಾ ಮಾಹಿತಿಗಳು ಕೇಂದ್ರ ಕಛೇರಿಯ/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಇವರ ಅಗತ್ಯ ಆಧರಿಸಿ ಬದಲಾವಣೆಯಾಗುವ ಶರತ್ತುಗಳಿಗೆ ಒಳಪಟ್ಟಿದೆ. ಯೋಜನೆಯ ಅಗತ್ಯ ಆಧರಿಸಿ ಅಗತ್ಯವಾದ ಹುದ್ದೆಗಳನ್ನು ಮಾತ್ರ ಬೇಕಾದ ಸಮಯದವರೆಗೆ ಮಾತ್ರ ನೇಮಿಸಿಕೊಳ್ಳಲಾಗುವುದು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅನುಷ್ಠಾನಕ್ಕೆ ಪೂರಕವಾಗಿ ಅನುಮೋದನೆಗೊಂಡಿರುವ ಈ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಭರ್ತಿಮಾಡಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ಈ ಮುಂದಿನ ಆಯ್ಕೆ ಮೇಲುಸ್ತುವಾರಿ ಸಮಿತಿಯ ಅಸ್ತಿತ್ವದಲ್ಲಿರುತ್ತದೆ.

| ಕ್ರ.ಸಂ | ಅಧಿಕಾರಿಗಳ ವಿವರ | ಸದಸ್ಯತ್ವದ ವಿವರ |
|---|---|---|
| 1 | ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು | ಅಧ್ಯಕ್ಷರು |
| 2 | ಗೌರವಾನ್ವಿತ ವಿಶ್ವವಿದ್ಯಾಲಯದ ನುರಿತ ಬೋಧಕ ಸಿಬ್ಬಂದಿ | ಸದಸ್ಯರು |
| 3 | ಪ್ರಾಂಶುಪಾಲರು ಜಿಲ್ಲಾ ತರಬೇತಿ ಕೇಂದ್ರ | ಸದಸ್ಯರು |
| 4 | ನಿರ್ದೇಶಕರು ಆರ್‌ಸೆಟ್/ರೂಡ್‌ಸೆಟ್ | ಸದಸ್ಯರು |
| 5 | ಯೋಜನಾ ನಿರ್ದೇಶಕರು ಡಿಆರ್‌ಡಿಎ | ಸದಸ್ಯ ಕಾರ್ಯದರ್ಶಿ |
| 6 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಸೂಚಿಸುವ ಇತರೆ ಸದಸ್ಯರು | |

ಈ ಎಲ್ಲಾ ಶರತ್ತುಗಳಿಗೆ ಒಪ್ಪಿಗೆ ಇರುವವರು ಮಾತ್ರ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.